# ಸ್ವಾಮಿ ಸತ್ಯಸ್ವರೂಪಾನಂದ (೧೯೦೦-೧೯೮೭)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

## ಭಾಗ ೧

೧೯೭೦ನೇ ಇಸವಿಯಲ್ಲಿ ಮಾಯಾವತಿಗೆ ಹೋದಾಗ ಕೆಲವು ದಿನ ಆಲ್ಮೋರಾದಲ್ಲಿದ್ದೆ. ಆಗ ಸ್ವಾಮಿ ಸತ್ಯಸ್ವರೂಪಾನಂದರ (ವಿಶೇಷ ಮಹಾರಾಜ್) ಪರಿಚಯವಾಯಿತು. ಪ್ರತಿದಿನವೂ ಸಾಯಂಕಾಲ ಅವರೊಡನೆ ತಿರುಗಾಡಲು ಹೋಗುತ್ತಿದ್ದೆ. ಒಂದು ದಿನ ನಾವು ಬೋಷಿ ಸೇನರ ಮನೆಗೂ ಹೋಗಿದ್ದೆವು. ಬೋಷಿ ಸೇನ್ ಆಗ ರಾಜಾ ಮಹಾರಾಜರ (ಸ್ವಾಮಿ ಬ್ರಹ್ಮಾನಂದರ) ಈ ಘಟನೆಯನ್ನು ಹೇಳಿದರು:

ಒಂದು ದಿನ ಅವರು ರಾಜಾ ಮಹಾರಾಜರಿಗೆ, ''ಮಹಾರಾಜ್, ನೀವು ತುಂಬ ಜಿಪುಣರು'' ಎಂದರಂತೆ. ಅವರು ''ಹೀಗೇಕೆ ಹೇಳುತ್ತೀ?'' ಎಂದು ಪ್ರಶ್ನಿಸಿದಾಗ ಬೋಶಿ ಬಾಬು, ''ಒಬ್ಬ ಶ್ರೀಮಂತನು ಯಾರಿಗೂ ಏನನ್ನೂ ಕೊಡದಿದ್ದರೆ, ಅವನು ಕೃಪಣನೆ. ನೀವಿಚ್ಛಿಸಿದರೆ ಇತರರಿಗೆ ಈಶ್ವರ ದರ್ಶನವನ್ನು ಮಾಡಿಸಬಹುದು. ಆದರೆ ನೀವು ಅದನ್ನು ಮಾಡುತ್ತಿಲ್ಲ. ಆದ್ದರಿಂದ ನೀವು ಕೃಪಣರೆ.'' ತಕ್ಷಣವೆ ಮಹಾರಾಜರು ಗಂಭೀರವಾಗಿ, ''ಈಶ್ವರಲಾಭ ಯಾರಿಗೆ ತಾನೆ ಬೇಕು? ಅಷ್ಟೇಕೆ-ಸಾಧು, ಬ್ರಹ್ಮಚಾರಿಗಳೂ ಬಂದು, 'ಮಹಾರಾಜ್, ದೀಕ್ಷೆ ನೀಡಿ, ಬ್ರಹ್ಮಚರ್ಯ ನೀಡಿ, ಸಂನ್ಯಾಸ ಕೊಡಿ' ಎಂದು ಹೇಳುವರಲ್ಲದೆ ಭಗವಂತನನ್ನು ಕೊಡಿಸಿ' ಎಂದು ಯಾರೂ ಕೇಳುವುದಿಲ್ಲ.''

ವಿಶೇಷ ಮಹಾರಾಜರು ನಡುನಡುವೆ ಮಾಯಾವತಿಗೆ ಹೋಗುತ್ತಿದ್ದರು. ಅವರು ನಾನಾ ಬಗೆಯ ಅಡುಗೆ ಹಾಗೂ ಸಿಹಿ ತಿಂಡಿಗಳನ್ನು ತಯಾರಿಸಬಲ್ಲವರಾಗಿದ್ದರು. ಶ್ರೀಮಾತೆಯವರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದ ಅವರು ಕಡೆಗೆ ಕಾಶಿ ಅದ್ವೈತ ಆಶ್ರಮದಲ್ಲಿದ್ದರು.

ಒಂದು ಸಂಜೆ ವಿಶೇಷ ಮಹಾರಾಜರೊಂದಿಗೆ ಆಲ್ಮೋರಾದ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಇತರ ಸಂಪ್ರದಾಯಕ್ಕೆ ಸೇರಿದ ಪರಿಚಿತ ಸಾಧುಗಳೊಬ್ಬರು ವಿಶೇಷ ಮಹಾರಾಜರನ್ನು ದ್ದೇಶಿಸಿ, **'ದೇಹಾಕಾರವೃತ್ತಿಃ ಮೃತ್ಯುಃ'** - 'ದೇಹದ ಬಗ್ಗೆ ಚಿಂತಿಸುವುದೇ ಮೃತ್ಯು' - ಎಂದರು. ವಾಸ್ತವವಾಗಿ, ದೇಹಧಾರಣೆ ಮಾಡಿದವನಿಗೆ ಮರಣ ತಪ್ಪಿದ್ದಲ್ಲ. ಆತ್ಮಕ್ಕೆ ಮರಣವೆಂಬುದಿಲ್ಲ. ಆ ಸಾಧುಗಳ ನುಡಿಗಳು ನನ್ನ ಮನಸ್ಸಿಗೆ ನಾಟಿದವು.

೧೯೮೬ರಲ್ಲಿ ಅಮೆರಿಕದಿಂದ ಸ್ವದೇಶಕ್ಕೆ ಹಿಂದಿರುಗಿದಾಗ ಅನೇಕ ದಿನಗಳು ಕಾಶಿಯಲ್ಲಿ ಕಳೆದಿದ್ದೆ. ಆಗ ಬಹುತೇಕ ಹಿರಿಯ ಸಾಧುಗಳ ಸಂದರ್ಶನ ಮಾಡಿ ಅವರು ಹೇಳಿದ್ದನ್ನು ಟೇಪ್ ಮಾಡಿಕೊಂಡಿದ್ದೆ. ಆ ಕ್ಯಾಸೆಟ್ಟುಗಳಿಂದ ಈ ಸ್ಮೃತಿಕತೆಗಳನ್ನು ಬರೆದದ್ದಾಯಿತು. ೧೯.೧೦.೧೯೮೬ ಹಾಗೂ೨೩.೧೦.೧೯೮೬ರಂದು ಕಾಶಿಯ ಅದ್ವೈತ ಆಶ್ರಮದಲ್ಲಿ ಸ್ವಾಮಿ ಸತ್ಯಸ್ವರೂಪಾನಂದರೊಡನೆ ಮಾತನಾಡುತ್ತ ಅವರ ಸ್ಮೃತಿಕತೆಗಳನ್ನು ಟೇಪ್ ಮಾಡಿಕೊಂಡೆ.

**ನಾನು:** ಮಹಾರಾಜ್, ನೀವು ಶ್ರೀಮಾತೆಯವರಿಂದ ಮಂತ್ರ ದೀಕ್ಷೆಯನ್ನು ಪಡೆದವರು. ಅವರ ಸ್ಮೃತಿಕತೆಯನ್ನು ಹೇಳಿ.

**ಮಹಾರಾಜ್:** ಸಿಲ್ಹೆಟ್‌ನಲ್ಲಿ ನಮ್ಮದೊಂದು ಸಂಘವಿತ್ತು. ಅದರಲ್ಲಿ ಠಾಕೂರ್-ಶ್ರೀಮಾತೆ-ಸ್ವಾಮೀಜಿಯವರ ಬಗ್ಗೆ ಚರ್ಚೆಸಲಾಗುತ್ತಿತ್ತು. ನನಗಾಗ ೧೯ ವರ್ಷ ವಯಸ್ಸು. ಅಲ್ಲಿ ಠಾಕೂರ್ -ಶ್ರೀಮಾತೆಯವರ ಬಗ್ಗೆ ತಿಳಿದುಕೊಂಡೆ. ಪ್ರೇಮೇಶ ಮಹಾರಾಜ್, ಯೋಗೇಶ್ ಮಹಾರಾಜ್ (ಸ್ವಾಮಿ ಅಶೋಕಾನಂದ) ಮೊದಲಾದ ಸಾಧುಗಳು ಬಹಳ ಪ್ರೇರಣೆ ನೀಡುತ್ತಿದ್ದರು. ಸ್ವಾಮಿ ಪ್ರಬುದ್ಧಾನಂದರು ೧೯೧೭ರಲ್ಲಿ ಶ್ರೀಮಾತೆಯವರಿಂದ ದೀಕ್ಷೆಯನ್ನು ಪಡೆದು ಸಂನ್ಯಾಸವನ್ನು ಪಡೆಯಲು ಪ್ರಯತ್ನಿಸಿದಾಗ ಅವರ ತಂದೆ ಅವರನ್ನು ಜಯರಾಂಬಾಟಿಯಿಂದ ಮನೆಗೆ ಕರೆತಂದಿದ್ದರು. ಶ್ರೀಮಾತೆಯವರು ಅವರಿಗೆ, ''ನಿನ್ನ ಕಷ್ಟಗಳು ದೂರವಾಗುತ್ತವೆ'' ಎಂದು ಭರವಸೆ ನೀಡಿದ್ದರು. ಶ್ರೀಮಾತೆಯವರ ಈ ಮಾತುಗಳನ್ನು ಅವರಿಂದ ಕೇಳಿದ್ದ ನಾನು ಶ್ರೀಮಾತೆಯವರಿಗೆ ಪತ್ರ ಬರೆದೆ. ಅವರು ನನಗೆ ಅವರ ಬಳಿಗೆ ಹೋಗಲು ಸಮ್ಮತಿಸಿದರು. ನನ್ನ ಬಳಿ ಹಣವಿರಲಿಲ್ಲ. ನಾನು ಅಶೋಕಾನಂದರಿಗೆ (ಆಗಿನ್ನೂ ಅವರು ಸಂನ್ಯಾಸ ಪಡೆದಿರಲಿಲ್ಲ) ಹೇಳಿದೆ, ''ನಾನು ಶ್ರೀಮಾತೆಯವರ ಬಳಿಗೆ ಹೋಗಬೇಕು. ಆದರೆ ನನ್ನಲ್ಲಿ ಹಣವಿಲ್ಲ.'' ಶಾಲಾ ಅಧ್ಯಾಪಕರಾಗಿದ್ದ ಅವರು ಕೇಶವ ಬಾಬು ಎಂಬ ಶ್ರೀಮಾತೆಯವರ ಶಿಷ್ಯರೊಬ್ಬರಿಗೆ ಈ ವಿಚಾರ ತಿಳಿಸಿದಾಗ ಅವರು ನನಗೆ ೨೦ ರೂಪಾಯಿಗಳನ್ನು ಕೊಟ್ಟರು. ಪ್ರಬುದ್ಧ ಮಹಾರಾಜ್ ಕಲ್ಕತ್ತೆಯಲ್ಲಿ ಮತ್ತೊಬ್ಬ ಭಕ್ತರಿಗೆ ನನ್ನ ವಸತಿಯ ಏರ್ಪಾಟು ಮಾಡಲು ಪತ್ರವನ್ನು ಬರೆದರು. ನಾನು ಕಲ್ಕತ್ತ ತಲುಪಿದಾಗ ಅವರು ಹೋಟೆಲ್‌ನಲ್ಲಿ ನನ್ನ ವಸತಿಯನ್ನು ಏರ್ಪಡಿಸಿ, ಮರುದಿನ ನನ್ನನ್ನು ಹೌರಾ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಅಲ್ಲಿ ನನಗೆ ಬಾಂಕುರಾಗೆ ಹೋಗುವ ಹುಡುಗನೊಬ್ಬನ ಪರಿಚಯವಾಯಿತು. ಅವನೂ ವಿಷ್ಣುಪುರಕ್ಕೆ ಹೊರ

ಟಿದ್ದ. ನಾವಿಬ್ಬರೂ ಟಿಕೇಟ್ ಖರೀದಿಸಿ ರೈಲು ಹತ್ತಿದೆವು. ರೈಲು ಗಾಡಿ ವಿಷ್ಣುಪುರದ ಸ್ಟೇಶನ್ ತಲುಪಿದಾಗ ರಾತ್ರಿ ಕಳೆದಿತ್ತು. ರೈಲಿನಿಂದ ಇಳಿದು ಯಾರೋ ''ಕೋತಲ್‌ಪುರಕ್ಕೆ ಹೋಗುವಿರಾ?'' ಎಂದು ಕೂಗಿ ಹೇಳಿದಾಗ ನಾನು, ''ಹೌದು'' ಎಂದೆ. ಮೂರು ರೂಪಾಯಿ ಕೊಟ್ಟು ಎತ್ತಿನಗಾಡಿಯಲ್ಲಿ ಕುಳಿತೆ. ಜಯಪುರ ಸೇರಿದಾಗ ಅಲ್ಲಿ ಸ್ವಲ್ಪ ತಿಂಡಿ ತಿಂದೆ. ಮುಂದೆ ಸಾಗುತ್ತಿದ್ದಂತೆ ಗಾಡಿಯ ಚಕ್ರ ಮುರಿಯಿತು. ಗಾಡಿಯವನು, ''ನೀವು ಕುಳಿತಿರಿ. ಹಳ್ಳಿಯಿಂದ ಬಿದಿರನ್ನು ತಂದು ಗಾಡಿಯನ್ನು ಸರಿಪಡಿಸುತ್ತೇನೆ'' ಎಂದ. ಹಳ್ಳಿಗೆ ಹೋದ ಅವನು ಹಿಂದಿರುಗಲಿಲ್ಲ. ಇನ್ನು ಸಂಜೆಯಾಗಿಬಿಡುತ್ತದೆ ಎಂದುಕೊಂಡು, ಉಳಿದ ಪ್ರಯಾಣಿಕರಿಗೆ ಅರ್ಧ ಬಾಡಿಗೆ ಕೊಟ್ಟು ನಡೆಯಲಾರಂಭಿಸಿದೆ. ಕೋತುಲಪುರಕ್ಕೆ ತಲುಪಿ, ಕೋಯಲ್‌ಪಾರಾಗೆ ಹೋಗುವ ದಾರಿಯನ್ನು ಕೇಳಿ ತಿಳಿದುಕೊಂಡೆ. ಸೂರ್ಯಾಸ್ತದ ಹೊತ್ತಿಗೆ ಅಲ್ಲಿಗೆ ತಲುಪಿದರೆ ಆಶ್ರಮದ ಸಾಧುಗಳು, ''ಇಂದು ಶ್ರೀಮಾತೆಯವರನ್ನು ಭೇಟಿಯಾಗಲಾರೆ. ನಾಳೆ ನೋಡುವೆಯಂತೆ,'' ಎಂದರು.

ಮರುದಿನ ಸ್ನಾನಾನಂತರ ಮಾತೃದರ್ಶನಕ್ಕಾಗಿ ತಯಾರಾದೆ. ಅಂದು ತಾರಕೇಶ್ವರಾನಂದರು ಮನೆಯನ್ನು ತ್ಯಜಿಸಿ ಕೋಯಲ್‌ಪಾರಾಗೆ ಬಂದಿದ್ದರು. ಸ್ವಾಮಿ ವಿದ್ಯಾನಂದರು ನಮ್ಮಿಬ್ಬರನ್ನು ಜಗದಾಂಬಾ ಆಶ್ರಮದಲ್ಲಿ ಶ್ರೀಮಾತೆಯವರ ಬಳಿಗೆ ಕರೆದೊಯ್ದರು. ಆಗ ತುಂಬು ಗರ್ಭವತಿಯಾದ ರಾಧುವಿನೊಂದಿಗೆ ಶ್ರೀಮಾತೆಯವರು ಅಲ್ಲಿದ್ದರು. ವಿದ್ಯಾನಂದರು ಶ್ರೀಮಾತೆಯವರಿಗೆ ನಮ್ಮನ್ನು ಪರಿಚಯಿಸುತ್ತ, ''ಅಮ್ಮಾ, ಇವರು ತಮ್ಮ ದರ್ಶನ ಪಡೆಯಲು ಬಂದಿದ್ದಾರೆ'' ಎಂದರು. ಆಗ ಶ್ರೀಮಾತೆ ಕೋಣೆಯಿಂದ ಹೊರಬಂದು, ವರಾಂಡದಲ್ಲಿ ನಮ್ಮ ಬಳಿ ಕುಳಿತರು. ಆಗ ಅವರು ತಮ್ಮ ತಲೆಯ ಮೇಲೆ ಮುಸುಕು ಹೊದ್ದಿರಲಿಲ್ಲ. ನಮಗಿನ್ನೂ ಆಗ ಚಿಕ್ಕವಯಸ್ಸು. ಅವರು ನನ್ನನ್ನು, ''ಎಲ್ಲಿಂದ ಬಂದಿರುವೆ?'' ಎಂದು ಕೇಳಿದಾಗ ''ಸಿಲ್ಹೆಟ್‌ನಿಂದ'' ಎಂದೆ. ''ಸುರೇನ್ (ಸತ್ಸಂಗಾನಂದ) ಹೇಗಿದ್ದಾನೆ? ಇಂದ್ರದಯಾಲ್ (ಪ್ರೇಮೇಶಾನಂದ) ಹೇಗಿದ್ದಾನೆ?'' ಎನ್ನುತ್ತ ಅವರು ಸಿಲ್ಹೆಟ್‌ನ ಭಕ್ತರ ಬಗ್ಗೆ ವಿಚಾರಿಸಿದರು. ತಾರಕೇಶ್ವರಾನಂದರನ್ನು ಏನೂ ಕೇಳಲಿಲ್ಲ.

ಆಗ ವಿದ್ಯಾನಂದರು ''ಈಗ ಶ್ರೀಮಾತೆಯವರು ಸ್ನಾನಕ್ಕೆ ಹೋಗುವರು. ನೀವಿನ್ನು ಹೊರಡಿ'' ಎಂದಾಗ ನಾವು ಆಶ್ರಮಕ್ಕೆ ಹಿಂದಿರುಗಿದೆವು. ಕೇಶವಾನಂದರು ಕೇಳಿದರು, ''ನೀವು ಮಂತ್ರದೀಕ್ಷೆಯ ಬಗ್ಗೆ ಶ್ರೀಮಾತೆಯವರನ್ನು ಕೇಳಿದಿರಾ?'' ''ಇಲ್ಲ , ಏನೂ ಹೇಳಿಲ್ಲ.'' ''ಅಯ್ಯೋ, ಅದರ ಬಗ್ಗೆ ಹೇಳಬೇಕಿತ್ತು, ಇಲ್ಲದಿದ್ದರೆ ಹೇಗೆ?'' ಎನ್ನುತ್ತ ಅವರು ಧ್ರುವಾನಂದರಿಗೆ, ''ಇವರನ್ನು ಪುನಃ ಶ್ರೀಮಾತೆಯವರ ಹತ್ತಿರ ಕರೆದುಕೊಂಡು ಹೋಗಿ, ಶ್ರೀಮಾತೆಯವರಿಗೆ, ಇವರು ದೀಕ್ಷೆಯನ್ನು ಪ್ರಾರ್ಥಿಸುತ್ತಿದ್ದಾರೆಂದು ತಿಳಿಸು'' ಎಂದರು. ಸ್ನಾನಕ್ಕೆ ಹೊರಟಿದ್ದ ಶ್ರೀಮಾತೆಯವರು ಧ್ರುವಾನಂದರಿಂದ ವಿಷಯವನ್ನು ಕೇಳಿ, ''ಇವರಿಗೆ ನಾಳೆ ಸ್ನಾನ ಮಾಡಿ ಬರಲು ಹೇಳು'' ಎಂದರು.

ಮರುದಿನ ಬಾಂಕುರಾದಿಂದ ನಾಲ್ಕು ಮಂದಿ ದೀಕ್ಷಾರ್ಥಿಗಳು ಬಂದರು. ಜುಲೈ ೧೯೧೯ ಶ್ರೀಮಾತೆಯವರು ಎಲ್ಲರಿಗೂ ಒಬ್ಬೊಬ್ಬರನ್ನಾಗಿ ಕರೆದು ದೀಕ್ಷೆಯನ್ನು ನೀಡಿದರು. ಅವರ ನುಡಿಗಳು ಮಧುರವಾಗಿದ್ದವು. ದೀಕ್ಷಾಸಮಯದಲ್ಲಿ ದೇವರ ಮನೆಯಿಂದ ಅವರು, ''ಬಾರಪ್ಪಾ'' ಎಂದು ಪ್ರೀತಿಯಿಂದ ಕರೆಯುತ್ತಿದ್ದುದನ್ನು ಎಂದಿಗೂ ಮರೆಯಲಾಗದು. ಅವರ ಕಣ್ಣುಗಳಿಂದ ಪ್ರೀತಿ-ಕರುಣೆಗಳು ಹೊರಸೂಸುತ್ತಿದ್ದವು. ದೀಕ್ಷೆಗೆ ಮುಂಚೆ ಶ್ರೀಮಾತೆಯವರು, ''ನಿಮ್ಮ ವಂಶಸ್ಥರು ಶಾಕ್ತರೆ? ಅಥವಾ ವೈಷ್ಣವರೆ?'' ಎಂದು ವಿಚಾರಿಸುತ್ತಿದ್ದರು. ದೀಕ್ಷಾರ್ಥಿಗಳೊಬ್ಬರಿಗೆ ಶ್ರೀರಾಮಕೃಷ್ಣರ ಮಂತ್ರವನ್ನು ನೀಡಿದ್ದರೆಂದೂ ಕೇಳಿರುವೆ. ಶ್ರೀಮಾತೆಯವರು ಎಂದೂ ತಾವು ಗುರುಗಳೆಂದು ಹೇಳಿಕೊಳ್ಳುತ್ತಿರಲಿಲ್ಲ. ''ಠಾಕೂರರೇ ಗುರುಗಳು'' ಎನ್ನುತ್ತಿದ್ದರು. ಮತ್ತೆ ಕೆಲವರಿಗೆ ''ನನ್ನನ್ನು ಕರೆ'' (ಪ್ರಾರ್ಥಿಸು) ಎಂದೂ ಹೇಳುತ್ತಿದ್ದರು. ಉದಾಹರಣೆಗೆ ಕಟಕ್‌ನ ವೈಕುಂಠನಿಗೆ ಹೀಗೆ ಹೇಳಿದಾಗ ಅದನ್ನು ಕೇಳಿದ ಲಕ್ಷ್ಮೀ ದೀದಿ ''ಅಮ್ಮಾ, ಏನೆಂದೆ?'' ಎಂದು ಕೇಳಲು ''ಏನೂ ಇಲ್ಲ'' ಎನ್ನುತ್ತ ಶ್ರೀಮಾತೆಯವರು ಮಾತು ಮರೆಸಿದರು. ಆಗ ಲಕ್ಷ್ಮೀ ದೀದಿ ವೈಕುಂಠನಿಗೆ ''ನೀನು ಶ್ರೀಮಾತೆಯವರನ್ನು ಕರೆ'' ಎಂದರು.

ಶ್ರೀಮಾತೆಯವರಿಗೆ ಓದು ಬರಹ ತಿಳಿಯದಿದ್ದರೂ ಅವರ ವ್ಯವಹಾರ ಜ್ಞಾನ ಅಪೂರ್ವವಾಗಿತ್ತು. ಜಗಳ-ವಿವಾದಗಳನ್ನು ಅವರೆಂದೂ ಇಷ್ಟಪಡುತ್ತಿರಲಿಲ್ಲ. ಕೋಯಲ್‌ಪಾರಾದಲ್ಲಿ ಶ್ರೀಮಾತೆಯವರ ಪದಚಿಹ್ನೆಯ ಕುರಿತು ಕೇಶವಾನಂದರ ತಾಯಿ ಹಾಗೂ ಮತ್ತೊಬ್ಬ ಮಹಿಳೆಯ ನಡುವೆ ವಿವಾದವುಂಟಾದಾಗ ಶ್ರೀಮಾತೆಯವರು ಹೇಳಿದರು, ''ನೀವೇಕೆ ಹೀಗೆ ಜಗಳವಾಡುತ್ತೀರಿ? ನಾನಿನ್ನೂ ಬದುಕಿದ್ದೇನೆ. ಅದೆಷ್ಟು ಪದಚಿಹ್ನೆಗಳು ಬೇಕೋ ತೆಗೆದುಕೊಳ್ಳಿ.''

ದೀಕ್ಷೆಯನ್ನು ನೀಡುವಾಗ ಶ್ರೀಮಾತೆಯವರು ಯಾವುದೇ ವಿಶೇಷ ಆಚಾರ-ಅನುಷ್ಠಾನಗಳನ್ನು ಮಾಡುತ್ತಿರಲಿಲ್ಲ. ಮೊದಲು ಠಾಕೂರರ ಪೂಜೆ ಮುಗಿಸಿ, ನಂತರ ದೀಕ್ಷೆಯನ್ನು ನೀಡುತ್ತಿದ್ದರು. ಒಬ್ಬರಾದ ಮೇಲೆ ಒಬ್ಬರಿಗೆ ದೀಕ್ಷೆಯನ್ನು ಕೊಡುತ್ತಿದ್ದರು. ಎಲ್ಲರಿಗೂ ಒಟ್ಟಿಗೆ ದೀಕ್ಷೆಯನ್ನು ನೀಡುತ್ತಿರಲಿಲ್ಲ. ನಮ್ಮಂತೆ ಆನುಷ್ಠಾನಿಕ ಪೂಜೆಯನ್ನೂ ಮಾಡುತ್ತಿರಲಿಲ್ಲ. ಆತ್ಮೀಯ ಬಾಂಧವರಿಗೆ ಪ್ರೀತಿ, ಸ್ನೇಹವನ್ನು ತೋರುವಂತೆಯೇ ಅವರು ಠಾಕೂರರ ಉಪಾಸನೆಯನ್ನು ಮಾಡುತ್ತಿದ್ದರು. ಠಾಕೂರರ ಭಾವಚಿತ್ರಕ್ಕೆ ಶ್ರೀಗಂಧದ ತಿಲಕವನಿಟ್ಟು, ಹೂವು-ಹಾರಗಳಿಂದ ಅಲಂಕರಿಸುತ್ತಿದ್ದರು. ನಂತರ ಜಪ-ಧ್ಯಾನಗಳನ್ನು ಮಾಡಿ ನೈವೇದ್ಯ ಮಾಡುತ್ತಿದ್ದರು. ಜಯರಾಂಬಾಟಿ ಮತ್ತು ಕೋಯಲ್‌ಪಾರಾದಲ್ಲಿದ್ದಾಗ ಅಡುಗೆ ಮನೆಯಲ್ಲಿ ಆಸನವನ್ನು ಸಜ್ಜುಗೊಳಿಸಿ ಠಾಕೂರರಿಗೆ ನಿವೇದಿಸುತ್ತಿದ್ದರು.

ಶ್ರೀಮಾತೆಯವರು ದೀಕ್ಷಾರ್ಥಿಗಳಿಗೆ ಬೆಳಗ್ಗೆ-ಸಂಜೆ ನಿತ್ಯ ಜಪಧ್ಯಾನ ಮಾಡಲು ನಿರ್ದೇಶಿಸುತ್ತಿದ್ದರು; ಕೈ ಬೆರಳಿನಲ್ಲಿ ಎಣಿಸುತ್ತ ಜಪಮಾಡುವುದನ್ನು ಕಲಿಸಿ ೧೦೮ ಸಲ ಜಪ ಮಾಡಲು ಹೇಳುತ್ತಿದ್ದರು. ಜಪಮಾಲೆಯನ್ನು ಉಪಯೋಗಿಸುವವರಿಗೆ ಮಾಲೆಯನ್ನು ಶುದ್ಧೀಕರಿಸಿ ಕೊಡುತ್ತಿದ್ದರು. ಶ್ರೀಮಾತೆಯವರ ಮೇಲೆ ಧ್ಯಾನ ಮಾಡಲಿಚ್ಛಿಸಿದರೆ 'ಬೇಡ' ಎನ್ನುತ್ತಿರಲಿಲ್ಲ. ಒಮ್ಮೆ ಕಲ್ಕತ್ತದ ಭಕ್ತನೊಬ್ಬ ಶ್ರೀಮಾತೆಯವರಿಂದ ಶಕ್ತಿ ಮಂತ್ರವನ್ನು ಪಡೆಯಲಿಚ್ಛಿಸಿದಾಗ ಅವರು ಹೇಳಿದರು, ''ಮಗು, ನಿನ್ನ ವಂಶದವರು ರಾಮನ ಉಪಾಸಕರು. ನಿನಗೆ ರಾಮ-ಮಂತ್ರವನ್ನೇ ನೀಡುವೆ.'' ದೀಕ್ಷೆಯ ಬಳಿಕ ಅವನು ಮನೆಗೆ ತೆರಳಿದಾಗ ತನ್ನ ವಂಶಸ್ಥರು ರಾಮನ ಉಪಾಸಕರೆಂಬುದು ಅವನಿಗೆ ತಿಳಿಯಿತು. ಶ್ರೀಮಾತೆಯವರು ಸರಿಯಾದ ಮಂತ್ರವನ್ನೇ ನೀಡಿದ್ದರು.

ಈ ಬಾರಿ ನಾನು ಕೋಯಲ್‌ಪಾರಾದಲ್ಲಿ ಏಳೆಂಟು ದಿನಗಳನ್ನು ಶ್ರೀಮಾತೆಯವರೊಂದಿಗೆ ಕಳೆದೆ. ಒಂದು ದಿನ ಶ್ರೀಮಾತೆಯವರು, ''ಮಗು, ರಾಧುವಿಗಾಗಿ ಒಂದಿಷ್ಟು ಮಾಂಸದ ಸೂಪ್ ತಯಾರಿಸಿಕೊಡುವೆಯಾ?'' ಎಂದು ನನ್ನನ್ನು ಕೇಳಿದರು. ನಾನೆಂದೆ, ''ಆಗಲಮ್ಮ, ಮಾಡಿಕೊಡುವೆ, ಆದರೆ ನನಗೆ ಸ್ವಲ್ಪ ಹೇಳಿಕೊಡಬೇಕು.'' ಶ್ರೀಮಾತೆಯವರೆಂದರು, ''ಮಾಂಸವನ್ನು ಚಿಕ್ಕ ಚಿಕ್ಕದಾಗಿ ತುಂಡರಿಸಿ ಸ್ವಲ್ಪ ತುಪ್ಪದ ಒಗ್ಗರಣೆ ಹಾಕಬೇಕು. ನಂತರ ಸ್ವಲ್ಪವೇ ಮಸಾಲೆ ಹಾಕಿ ನೀರಿನಲ್ಲಿ ಬೇಯಿಸಬೇಕು. ಈ ಸೂಪ್-ಅನ್ನು ಬಟ್ಟಲಿನಲ್ಲಿ ತೆಗೆದುಕೊಂಡು ಬಾ.'' ಮಾರನೆ ದಿನ ಬಿಸಿ ಬಟ್ಟಲನ್ನು ಕೈಯಲ್ಲಿ ಹಿಡಿದು ಆಶ್ರಮದಿಂದ ಜಗದಂಬಾ ಆಶ್ರಮಕ್ಕೆ ಹೋಗುತ್ತಿದ್ದಾಗ, ಬಿಸಿ ತಡೆಯಲಾಗದೆ ನನ್ನ ಕೈಯಿಂದ ಬಟ್ಟಲು ಜಾರಿ, ದಾರಿಯಲ್ಲಿ ಬಿದ್ದುಬಿಟ್ಟಿತು. ಭಯದಿಂದ ಉದ್ವಿಗ್ನನಾಗಿ ನಾನು ಸ್ವಾಮಿ ಕೇಶವಾನಂದರಿಗೆ ಎಲ್ಲವನ್ನೂ ತಿಳಿಸಿದೆ. ಅವರು, ''ಹೀಗೆ ಮಾಡುವುದೇ! ಹೀಗೆ ಮಾಡುವುದೇ! ಶ್ರೀಮಾತೆಯವರು ಏನೆಂದುಕೊಂಡಾರು! ಹೋಗಲಿ ಬಿಡು. ನೀನೀಗ ಅವರ ಬಳಿ ಹೋಗಿ ಎಲ್ಲವನ್ನೂ ವಿವರಿಸು'' ಎಂದರು. ನನಗೆ ಧೈರ್ಯವಿಲ್ಲ. ಆದರೂ ಹೆದರುತ್ತಲೇ ಶ್ರೀಮಾತೆಯವರ ಬಳಿ ಸಾರಿ, ''ಅಮ್ಮಾ! ಬಿಸಿ ಸೂಪ್ ಬಟ್ಟಲು ನನ್ನ ಕೈಯಿಂದ ಬಿದ್ದುಹೋಯಿತು'' ಎಂದಾಗ ಅವರು, ''ಅಯ್ಯೋ! ಹಿಡಿಯಲು ಕಲಿತಿಲ್ಲ, ಹಿಡಿಯಲು ಕಲಿತಿಲ್ಲ! ಜಾಗರೂಕತೆ ವಹಿಸಬೇಕು'' ಎಂದರು. ನಾನೆಂದೆ, ''ಅಮ್ಮಾ, ನೀವು ಹೇಳಿದರೆ ಪುನಃ ಸೂಪನ್ನು ತಯಾರಿಸಿ ತರುತ್ತೇನೆ.'' ಆಗ ಅವರು, ''ಇವತ್ತು ಬೇಕಾಗಿಲ್ಲ'' ಎಂದರು. ಮರುದಿನ,''ಈ ಹುಡುಗ ಸೂಪ್ ತಯಾರಿಸಲಿ, ಬೇರೊಬ್ಬರ ಕೈಯಲ್ಲಿ ಅದನ್ನು ನನಗೆ ತಲುಪಿಸಿ'' ಎಂದು ಹೇಳಿ ಕಳುಹಿಸಿದರು.

ಕೋಯಲ್‌ಪಾರಾ ಆಶ್ರಮದಲ್ಲಿ ಏಳೆಂಟು ದಿನಗಳನ್ನು ಕಳೆದಾಗ ಶ್ರೀಮಾತೆಯವರು ನನಗೆ, ''ನೀನು ಮಠದಲ್ಲಿ ರಾಖಾಲ್-ಶರತ್‌ರ ಬಳಿ ಹೋಗು. ಅವರು ನಿನ್ನನ್ನು ಕಳುಹಿಸಿದಲ್ಲಿಗೆ ನೀನು ಹೋಗಬೇಕಾಗುವುದು'' ಎಂದರು. ನಾನು ನೇರ 'ಉದ್ಬೋಧನ'ಕ್ಕೆ ಹೋಗಿ ಶರತ್ ಮಹಾರಾಜರನ್ನು ಕಂಡೆ. ಅವರು ನನ್ನನ್ನು, ''ಎಲ್ಲಿಂದ ಬಂದಿರುವೆ?'' ಎಂದು ಕೇಳಿದಾಗ ನಾನು ''ಕೋಯಲ್‌ಪಾರಾದಲ್ಲಿ ಶ್ರೀಮಾತೆಯವರ ಬಳಿಯಿಂದ ಬಂದಿದ್ದೇನೆ. ಅವರು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನು ಗೃಹತ್ಯಾಗ ಮಾಡಿ ಬಂದಿದ್ದೇನೆ. ನೀವು ಎಲ್ಲಿಗೆ ಕಳುಹಿಸಿದರೆ ಅಲ್ಲಿಗೆ ಹೋಗುತ್ತೇನೆ'' ಎಂದೆ. ಅವರು ನನಗೆ 'ಉದ್ಬೋಧನ'ದಲ್ಲಿ ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಮಿಸಲು ಹೇಳಿದರು. ಅನಂತರ ಸಾಯಂಕಾಲ ಬಲರಾಮ ಮಂದಿರದಲ್ಲಿದ್ದ ರಾಜಾ ಮಹಾರಾಜರ ಬಳಿಗೆ ಕಳುಹಿಸಿದರು. ಶ್ರೀಮಾತೆಯವರು ಹೇಳಿದ್ದನ್ನು ನಾನು ರಾಜಾ ಮಹಾರಾಜರಿಗೆ ಹೇಳಿದೆ. ಅದನ್ನು ಕೇಳಿದ ಅವರು ''ನೀನೀಗ ಕಾಶಿಗೆ ಹೋಗು. ಆಮೇಲೆ ನಿನ್ನನ್ನು ವೃಂದಾವನ ಇಲ್ಲವೆ ಅಲಹಾಬಾದಿಗೆ ಕಳುಹಿಸುತ್ತೇವೆ'' ಎಂದಷ್ಟೇ ಹೇಳಿದರು.

*(ಮುಂದುವರಿಯುವುದು)*

## ಮರಳು ಮತ್ತು ಕಲ್ಲು

ಇಬ್ಬರು ಸ್ನೇಹಿತರು ಮರುಭೂಮಿಯಲ್ಲಿ ನಡೆದು ಹೋಗುತ್ತಿದ್ದರು. ಅವರ ನಡುವೆ ಏನೋ ವಾದ ವಿವಾದ ನಡೆದು, ಜಗಳವಾಗಿ ಪರಿಣಮಿಸಿತು. ಒಬ್ಬ ಸ್ನೇಹಿತ ಇನ್ನೊಬ್ಬನ ಕೆನ್ನೆಗೆ ಒಂದು ಬಾರಿಸಿದ. ಆಗ ಏಟು ತಿಂದವನು ಏನೂ ಹೇಳಲಿಲ್ಲ. ಅವನು ಮರಳಿನ ಮೇಲೆ ಬರೆದ: 'ಇಂದು ನನ್ನ ಆತ್ಮೀಯ ಸ್ನೇಹಿತ ನನ್ನ ಕೆನ್ನೆಗೆ ಏಟು ಕೊಟ್ಟ.' ಅವರು ನಡಿಗೆ ಮುಂದುವರಿಸಿದರು. ಆಗ ಒಂದು ನೀರಿನ ಕೊಳ (ಓಯಸಿಸ್) ಕಾಣಿಸಿತು. ಅಲ್ಲಿ ಸ್ನಾನ ಮಾಡಲು ಇಬ್ಬರೂ ನಿರ್ಧರಿಸಿದರು. ಆಗ ಏಟು ತಿಂದ ಸ್ನೇಹಿತ ಕೆಸರಿನಲ್ಲಿ ಸಿಕ್ಕಿಕೊಂಡ. ಅವನು ಇನ್ನೇನು ಮುಳುಗಿಹೋಗುವುದರಲ್ಲಿದ್ದ. ಆದರೆ ಅವನ ಸ್ನೇಹಿತ ಅವನನ್ನು ಮೇಲಕ್ಕೆ ಎಳೆದು ಹಾಕಿದ. ಸಾವಿನ ದವಡೆಯಿಂದ ಪಾರಾದ ಸ್ನೇಹಿತ ಈಗ ಒಂದು ಕಲ್ಲಿನ ಮೇಲೆ ಬರೆದ: 'ಇಂದು ನನ್ನ ಆತ್ಮೀಯ ಸ್ನೇಹಿತ ನನ್ನ ಜೀವವನ್ನು ಉಳಿಸಿದ.' ಆಗ ಅವನನ್ನು ಉಳಿಸಿದ ಸ್ನೇಹಿತ ಕೇಳಿದ: ''ಅಲ್ಲಯ್ಯಾ , ಮೊದಲು ನಾನು ನಿನ್ನ ಕೆನ್ನೆಗೆ ಬಾರಿಸಿದಾಗ ನೀನು ಮರಳಿನ ಮೇಲೆ ಬರೆದೆ. ಈಗ ಕಲ್ಲಿನ ಮೇಲೆ ಬರೆದೆ, ಏಕೆ?'' ಅದಕ್ಕೆ ಸ್ನೇಹಿತ ಉತ್ತರಿಸಿದ: ''ಯಾರಾದರೂ ನಮಗೆ ನೋವು ಉಂಟು ಮಾಡಿದರೆ ಅದನ್ನು ಮರಳಿನ ಮೇಲೆ ಬರೆಯಬೇಕು. ಆಗ ಕ್ಷಮೆಯೆಂಬ ಗಾಳಿ ಬೀಸಿಬಂದು ಅದನ್ನು ಅಳಿಸಿಹಾಕುವುದು. ಆದರೆ ಯಾರಾದರೂ ನಮಗೆ ಒಳ್ಳೆಯದನ್ನು ಮಾಡಿದರೆ, ಅದನ್ನು ಕಲ್ಲಿನ ಮೇಲೆ ಬರೆಯಬೇಕು, ಅದನ್ನು ಯಾವ ಗಾಳಿಯೂ ಅಳಿಸಿ ಹಾಕಲಾರದು.'' ನೀತಿ : **ನಿಮ್ಮ ನೋವನ್ನು ಮರಳಿನ ಮೇಲೆ ಬರೆದಿಡಿ. ನಿಮ್ಮ ಭಾಗ್ಯವನ್ನು ಕಲ್ಲಿನ ಮೇಲೆ ಬರೆದಿಡಿ.**